ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು
Office of the Deputy Commissioner, Mysore Dist, Mysore-570005
Ph. No. 0821-2424079, Fax No. 2429012, 2428383 E-mail dcmys-ka@nic.in

ನಂ. ಆರ್‌ಕೆಎಲ್ ಸಿ.ಆರ್. 212 /2011-12 ದಿನಾಂಕ : 11-01-2012

## ಟೆಂಡರ್ ಪ್ರಕಟಣೆ

ವಿಷಯ : ಕಂದಾಯ ಕಛೇರಿಗಳ ಅಭಿಲೇಖಾಲಯಕ್ಕೆ ಉತ್ತಮ ಗುಣಮಟ್ಟದ ಕಬ್ಬಿಣದ ರ್‍ಯಾಕುಗಳು, ಬಾಕ್ಸ್‌ಗಳನ್ನು ಮತ್ತು ಲೇಬಲ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ : ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 55 ಎಂಆರ್‌ಆರ್ 2009 ದಿನಾಂಕ : 31.08.2009

***

ಮೈಸೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ, ಉಪ ವಿಭಾಗಾಧಿಕಾರಿಗಳ ಮತ್ತು ತಹಶೀಲ್ದಾರ್‌ರವರ ಕಛೇರಿಯ ಅಭಿಲೇಖಾಲಯದಲ್ಲಿರುವ ಕಡತಗಳನ್ನು ಸಂರಕ್ಷಿಸಲು ಸರ್ಕಾರವು ಸೂಚನೆಯನ್ನು ನೀಡಿದೆ. ಈ ಸಂಬಂಧ ಕಡತಗಳ ಸಂರಕ್ಷಣೆಯ ಉದ್ದೇಶಕ್ಕಾಗಿ ಈ ಕೆಳಕಂಡ ಮಾದರಿಯ ಸಾಮಗ್ರಿಗಳು ಅಗತ್ಯವಿರುತ್ತವೆ.

| ಕ್ರ.ಸಂ. | ವಿವರ | ಮಾದರಿ | ಅಪೇಕ್ಷಿಸಿರುವ ದರ |
|---|---|---|---|
| 1 | 2 | 3 | 4 |
| 1 | ಕಬ್ಬಿಣದ ರ್‍ಯಾಕುಗಳು | Heavy duty storage H 8' x D 17" x W 4' 9" | |
| | | 14 guage angles, 18 guage sheets with reinforcement | |
| | | Each shelf in the rack can carry up to 80 kg. | |
| | | Entire rach is capable to bearing a weight of 400 kgs. | |
| | | Racks are knock-down condition and can be assembled at on location. | |
| | | Racks are painted / powder coated to enable long lasting usage. | |
| 2 | ಕಡತಗಳನ್ನು ಸಂರಕ್ಷಿಸಲು | Long term archival box with water absorbing | |
| | ಬಾಕ್ಸ್‌ಗಳು. | It should be insect resistant | |
| | | HIght of the box is 10.5 inches | |
| | | A clearance of 2 inches clearance on top | |
| | | Width of the box is 12 inch. | |
| | | Length of the box is 15.6 inches | |
| | | Compression strength 180 kgf | |
| | | Burst strength 10.9 kg / sq. cm. | |
| | | Includes a water absorbant silica gel sachet of 20 gms. | |
| 3 | ಕಡತಗಳನ್ನು ಸಂರಕ್ಷಿಸಲು ಬಾಕ್ಸ್‌ಗಳು | ಹೆಚ್.ಡಿ.ಕೋಟೆ ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಿಗೆ ಸರಬರಾಜು ಮಾಡಬೇಕಾಗಿರುವ ಮಾದರಿ. **Standard Ploypropylene boxes** | |
| | | It should be water proofing | |
| | | It should be insect resistant | |

| | | | |
|---|---|---|---|
| | | Capable to preserve documents | |
| | | Compression strength 60 kg | |
| | | Burst strength 12.50 KG/square | |
| | | Length of Box is 15" | |
| | | Width of Box is 12" | |
| | | Hight of the Box is 10" | |
| | | Thickness 5.00 mm | |
| | | Silicon Jell Socket 20 Gm | |
| | | Moisture Resistant | |
| 4 | Coloured Lables | Suitable designed color coded label for box identification | |
| | | Suffecient size for incorporating required written matter | |
| | | Available in 5 different colours (Blue, Green, Red, Yellow, White) | |
| | | Size of lable 7" x 6" it should be good adhesive | |

ಮೇಲ್ಕಂಡಂತೆ ಸಾಮಗ್ರಿಗಳನ್ನು ಖರೀದಿಸಿ ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿ ಹಾಗೂ ಉಪ ವಿಭಾಗಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡಬೇಕಾಗಿದ್ದು ಒಂದು ಐಟಂ ಸಾಮಗ್ರಿಯನ್ನು ಸರಬರಾಜು ಮಾಡಲು ತಗಲುವ ದರ ಎಷ್ಟು ಎಂಬ ಬಗ್ಗೆ ದರ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ನಮೂದಿಸಿ ಭದ್ರತಾ ಠೇವಣಿಯೊಂದಿಗೆ ಈ ಕಛೇರಿಗೆ ದಿನಾಂಕ : 04-02-2012 ರಂದು ಸಂಜೆ 4-00 ಗಂಟೆಯೊಳಗಾಗಿ ಸೀಲು ಮಾಡಿದ ಮೊಹರಿನಲ್ಲಿ ಸಲ್ಲಿಸಲು ಕೋರಿದೆ.

<u>ಷರತ್ತುಗಳು :</u>

1. ದರಪಟ್ಟಿ ಸಲ್ಲಿಸುವ ಟೆಂಡರ್‌ದಾರರು ದರಪಟ್ಟಿಯೊಂದಿಗೆ ಇ.ಎಂ.ಡಿ. ಮೊಬಲಗು ರೂ. 1.10 ಲಕ್ಷಗಳಿಗೆ ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಬ್ಯಾಂಕ್ ಡಿ.ಡಿ. ಯನ್ನು ಲಗತ್ತಿಸಿ ಮೊಹರಾದ ಕವರಿನಲ್ಲಿ ಸಲ್ಲಿಸತಕ್ಕದ್ದು.
2. ಸರಬರಾಜು ಮಾಡುವ ಸಾಮಗ್ರಿಗಳು ಪ್ರಕಟಣೆಯಲ್ಲಿ ತಿಳಿಸಿರುವ ಮಾದರಿಯಂತೆ ಇರತಕ್ಕದ್ದು. ಇದರಲ್ಲಿ ವ್ಯತ್ಯಾಸಗಳು ಕಂಡುಬಂದಲ್ಲಿ ಹಣ ಪಾವತಿಸುವುದಿಲ್ಲ.
3. ಆಯ್ಕೆಯಾದ ಟೆಂಡರ್‌ದಾರರು ಕಾರ್ಯಾದೇಶ ಪಡೆದ 15 ದಿವಸಗಳೊಳಗಾಗಿ ಸ್ವಂತ ಸಾಗಾಣಿಕೆಯಿಂದ ಸಾಮಗ್ರಿಗಳನ್ನು ಜಿಲ್ಲಾಧಿಕಾರಿ / ಉಪ ವಿಭಾಗಾಧಿಕಾರಿ / ತಹಶೀಲ್ದಾರ್ ರವರ ಕಛೇರಿಗೆ ಸರಬರಾಜು ಮಾಡಿ ಅವರಿಂದ ಸಾಮಗ್ರಿಗಳ ಗುಣಮಟ್ಟ ಮತ್ತು ಸ್ವೀಕೃತಿ ಕುರಿತು ಪತ್ರ ಪಡೆದು ಜಿಲ್ಲಾ ಕಛೇರಿಗೆ ಸಲ್ಲಿಸುವುದು. ಅನುದಾನ ಮಂಜೂರಾತಿ ವಿಚಾರದಲ್ಲಿ ಸಂಬಂಧಪಟ್ಟವರಿಂದ ಸ್ಪಷ್ಟ ಅಭಿಪ್ರಾಯ ಪಡೆದು ಸಲ್ಲಿಸತಕ್ಕದ್ದು.
4. ಬಿಲ್ ಮಾಡುವಾಗ ಆದಾಯ ತೆರಿಗೆಯನ್ನು ಕಟಾಯಿಸಿ ಉಳಿದ ಮೊಬಲಗನ್ನು ಪಾವತಿಸಲು ನಿಯಮಾನುಸಾರ ಕ್ರಮ ವಹಿಸಲಾಗುವುದು.
5. ಟೆಂಡರ್ ಸಲ್ಲಿಸುವವರು ಅಪೇಕ್ಷೆಯುಳ್ಳ ಏಜೆನ್ಸಿರವರು ಕಛೇರಿ ವೇಳೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಅಭಿಲೇಖಾಲಯದಲ್ಲಿ ಸಂಪರ್ಕಿಸಿ ನಿಗದಿತ ನಮೂನೆಯನ್ನು ಪಡೆದುಕೊಂಡು ವಿವರವನ್ನು ಪಡೆಯಬಹುದು.
6. ಇ.ಎಂ.ಡಿ. ಮೊಬಲಗು ಬಾಬ್ತು ಬ್ಯಾಂಕ್ ಡಿಡಿ. ಯನ್ನು ಸಲ್ಲಿಸದೆ ದರಪಟ್ಟಿಯನ್ನು ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
7. ಜಿಲ್ಲಾಧಿಕಾರಿಗಳು ವಿಧಿಸುವ ಇತರೆ ಷರತ್ತುಗಳು
8. ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಟೆಂಡರ್ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಜಿಲ್ಲಾಧಿಕಾರಿ
ಮೈಸೂರು ಜಿಲ್ಲೆ